# ಮರಣವೆ ಮಹಾನವಮಿ

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯ!
ಹಾಳುಗೆಟ್ಟೋಡುವ ಆಳು ನಾನಲ್ಲವಯ್ಯಾ:
ಕೇಳು, ಕೂಡಲಸಂಗಮದೇವಾ, ಮರಣವೇ ಮಹಾನವಮಿ.

ಮಹಾನವಮಿ ಹಬ್ಬವನ್ನು ಸುತ್ತುವರೆದಿರುವ ಚಾರಿತ್ರಿಕ ಸಂಗತಿಯೊಂದರತ್ತ ಈ ವಚನ ಗಮನ ಸೆಳೆಯುತ್ತದೆ. ಈಗಷ್ಟೇ ದಸರಾ ಹಬ್ಬವನ್ನು ಸಂಭ್ರಮಿಸಿದ್ದೇವೆ. ಅಮಾವಾಸ್ಯೆಯಾದ ಒಂಬತ್ತನೇ ದಿನ ಮಾನವಮಿಯಾದರೆ ಹತ್ತನೇ ದಿನ ದಸರಾ ಯಾನೇ ದಸವಿ ದಿನ್. ಸಾಮಾನ್ಯವಾಗಿ ಶಾಕ್ತರು ಇದನ್ನು ದೇವಿ, ದುರ್ಗೆ, ಚಂಡಿ, ಚಾಮುಂಡಿ ಇತ್ಯಾದಿ ಹೆಸರುಗಳಿಂದ ಶಕ್ತಿ ದೇವತೆಯನ್ನು ಪ್ರಾರ್ಥಿಸುತ್ತಾರೆ. ಚಿದಾನಂದ ಅವಧೂತರ ದೇವಿಪುರಾಣದಲ್ಲಿ ಜಗದಂಬೆಯೂ ಲೋಕ ಕಂಟಕವಾಗಿ ಪರಿಣಮಿಸಿದ್ದ ಶುಂಭ, ನಿಶುಂಭ ಇತ್ಯಾದಿ ರಾಕ್ಷಸರನ್ನು ಸಂಹರಿಸಿ ಭಕ್ತರನ್ನು ಪೊರೆದ ದಿನವೆಂದು ಉಲ್ಲೇಖಿಸುತ್ತಾರೆ. ಮೈಸೂರಿನವರು ಚಾಮುಂಡಾಂಬಿಕೆಯು ಮಹಿಷಾಸುರನೆಂಬ ರಾಕ್ಷಸನನ್ನು ವಧೆ ಮಾಡಿ ಲೋಕದಲ್ಲಿ ಶಾಂತಿ, ಸಮೃದ್ಧಿಯನ್ನು ನೆಲೆಸುವಂತೆ ಮಾಡಿದ ದಿನದ ನೆನಪಿಗಾಗಿ ನಾಡಹಬ್ಬವೆಂದು ಆಚರಿಸಿಕೊಂಡು ಬರುತ್ತಿದ್ದಾರೆ. ಇದೀಗ ರಾಜ್ಯ ಸರಕಾರದಿಂದ ಆಚರಿಸುವ ನಾಡಿನ ಸಾಂಸ್ಕೃತಿಕ ಅಸ್ಮಿತೆಯ ದಿನವಾಗಿಯೂ ಬಿಂಬಿಸಲಾಗುತ್ತಿದೆ.

ಶರಣ ಸಂಸ್ಕೃತಿಯ ಚರಿತ್ರೆಯಲ್ಲಿ ಇದಕ್ಕೆ ಬೇರೆಯೆ ಆಚರಣಾ ಪರಂಪರೆ ಇದೆ. 12ನೇ ಶತಮಾನದಲ್ಲಿ ಕಲಚೂರಿಗಳ ರಾಜಧಾನಿಯಾಗಿದ್ದ ಈಗಿನ ಬಸವಕಲ್ಯಾಣದಲ್ಲಿ ಶಿವಶರಣರು ತಮ್ಮ ಕ್ರಾಂತಿಕಾರಿಗಳಿಂದಾಗಿ ಪ್ರಭುತ್ವದ ದಾಳಿಗೆ ಬಲಿಯಾಗಿ ಹುತಾತ್ಮರಾದ ದಿನವಾಗಿದೆ. ಬಸವಾದಿ ಶಿವಶರಣರು ವರ್ಗ, ವರ್ಣ, ಲಿಂಗ ಅಸಮಾನತೆಯ ವಿರುದ್ಧ ಹುಟ್ಟುಹಾಕಿದ್ದ ತಾತ್ವಿಕ ಚಳವಳಿಯು ಉಚ್ಛ್ರಾಯ ಸ್ಥಿತಿಗೆ ಏರಿತ್ತು. ವೈದಿಕ ಪ್ರಣೀತ ಚಾತುರ್ವರ್ಣ ವ್ಯವಸ್ಥೆಯು ನೈಸರ್ಗಿಕ ಹುಟ್ಟನ್ನು ಧಾರ್ಮಿಕೀಕರಣಕ್ಕೊಳಪಡಿಸಿ ಜನರನ್ನು ಮೇಲು, ಕೀಳುಗಳಲ್ಲಿ ಒಡೆದು ಹಾಕಿತ್ತಲ್ಲದೆ; ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿರುವ ಎಲ್ಲ ಬಗೆಯ ಅನಿಷ್ಟ, ಅಸಮಾನತೆಗಳಿಗೆ ಜೀವಿಗಳ ಪೂರ್ವ ಜನ್ಮದ ಪಾಪ, ಪುಣ್ಯಗಳೆ ಕಾರಣವೆಂದು ನಂಬಿಸಲಾಗಿತ್ತು. ಶೂದ್ರರು, ಪಂಚಮರು ಸ್ವಯಂ ನರಕದಲ್ಲಿ ಬಿದ್ದು ಅದನ್ನು ಪ್ರಶ್ನಾತೀತವಾಗಿ ಒಪ್ಪಿ ಅಪ್ಪಿಕೊಂಡು ಬರಲಾಗಿತ್ತಷ್ಟೇ. ಈ ಕಲ್ಪಿತ ಅವಾಂತರಗಳ ವಿರುದ್ಧ ಶರಣರು ತಾತ್ವಿಕ ಸಮರವನ್ನು ಸಾರಿ ಎಲ್ಲ ದುಡಿಯುವ ಜನರನ್ನು ಒಂದುಗೂಡಿಸಿ ಸಮಸಮಾಜ ನಿರ್ಮಾಣಕ್ಕಾಗಿ ಆಧ್ಯಾತ್ಮಿಕ ಚಳವಳಿಯನ್ನೆ ಹುಟ್ಟು ಹಾಕಿದ್ದರು.

ತಮ್ಮ ಕಾಲಕ್ಕಿಂತ ತುಸು ಮುಂದಾಲೋಚನೆ ಹೊಂದಿದ್ದ ಬಸವಾದಿಗಳು ಜಾತಿ ವೈಷಮ್ಯ ಹೋಗಲಾಡಿಸಬೇಕಾದರೆ ಬೇಟಿ, ರೋಟಿ ಸಂಗಮವಾಗಬೇಕೆಂದು ಬಯಸಿದರು. ದಲಿತರ ಕೇರಿಗಳಿಗೆ ಮೇಲ್ವರ್ಣದವರು ಪ್ರಸ್ಥಾನಗೈಯ್ದು ಅವರ ಮನೆಯಲ್ಲಿ ಸಹಪಂಕ್ತಿ ಭೋಜನ ಮಾಡುವುದು ಮತ್ತು ತಳಸಮುದಾಯದ ವರನೊಂದಿಗೆ ಮೇಲ್ಜಾತಿಯ ಕನ್ಯೆಯನ್ನು ವಿವಾಹ ಮಾಡುವುದು (ವಿಲೋಮ ವಿವಾಹ) ಇವೆರಡೂ ಮಾಡುವ ಮೂಲಕ ಜಾತಿ ಪದ್ಧತಿಗೆ ಬೆಂಕಿಯಿಡಲು ಬಯಸಿದರು. ತಮ್ಮ ಈ ಮಿಷನ್‌ನ ಭಾಗವಾಗಿ ಬಸವಣ್ಣನವರು ಡೋಹರ ಕಕ್ಕಯ್ಯ, ಸಂಭೋಳಿ ನಾಗಿದೇವ ಮುಂತಾದವರ ಮನೆಯಲ್ಲಿ ಊಟ ಮಾಡಿದ್ದನ್ನು ಕೃತಾರ್ಥರಾಗಿ ಸಂಭ್ರಮಿಸಿದ್ದರು. ಅಂತೆಯೇ ಬ್ರಾಹ್ಮಣ ಮಧುವರಸನ ಮಗಳು ಮತ್ತು ಸಮಗಾರ ಹರಳಯ್ಯನ ಮಗನಿಗೂ ಅಂತರ್ಜಾತಿ ವಿವಾಹ ಏರ್ಪಡಿಸಿ ಸನಾತನಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ್ದರು. ತನ್ಮೂಲಕ ಅಸಂಖ್ಯ ದುಡಿಯುವ ಜನತೆ ಪುರೋಹಿತಶಾಹಿಯ ಕರ್ಮಠತೆಯನ್ನು ಧಿಕ್ಕರಿಸಿ ಮುನ್ನಡೆದಿದ್ದರು. ಇದರಿಂದ ಅಪ್ರತಿಭರಾದ ವೈದಿಕರು ಬಿಜ್ಜಳನ ಮೇಲೆ ಒತ್ತಡ ತಂದು ವರ್ಣ ಸಂಕರವಾಯಿತೆಂದು ದಂಗೆ ಎಬ್ಬಿಸುತ್ತಾರಲ್ಲದೆ ಅದಕ್ಕೆ ಕಾರಣೀಕರ್ತನಾದ ಬಸವಣ್ಣನವರ ಶಿರಚ್ಛೇದನ ಮಾಡಬೇಕೆಂದು ಪಟ್ಟು ಹಿಡಿಯುತ್ತಾರೆ. ಬಸವಣ್ಣನವರೊಂದಿಗೆ ಅನ್ಯೋನ್ಯ ಬಾಂಧವ್ಯ ಹೊಂದಿದ ಬಿಜ್ಜಳನಿಗೆ ಉಗ್ರವಾಗಿ ಶಿಕ್ಷಿಸಲು ಸಾಧ್ಯವಾಗದಿದ್ದಾಗ ವೈದಿಕಶಾಹಿ ಒತ್ತಡಕ್ಕೆ ಮಣಿದು ಶಿರಚ್ಛೇದನ ಬದಲು ಗಡಿಪಾರು ಶಿಕ್ಷೆ ಘೋಷಿಸುತ್ತಾನೆ. ಅಷ್ಟಕ್ಕೂ ಕಲ್ಯಾಣದಲ್ಲಿದ್ದರೆ ಬಸವಣ್ಣನವರಿಗೆ ಅಪಾಯ ತಪ್ಪಿದ್ದಲ್ಲ ಎಂದು ಮನಗಂಡೆ ಬಿಜ್ಜಳ ಅವರನ್ನು ಅಲ್ಲಿಂದ ಸಾಗ ಹಾಕುತ್ತಾನೆ. ಬಿಜ್ಜಳನ ಅರಮನೆಯಿಂದ ನೇರವಾಗಿ ನಿರ್ಗಮಿಸಿದ ಬಸವ ಬಿಜ್ಜಳರಾಯನ ಆಳ್ವಿಕೆಯ ಪ್ರದೇಶದಿಂದ ಆಚೆ ಹೋಗುತ್ತಿರಲಾಗಿ ಕೂಡಲಸಂಗಮಕ್ಕೆ ತಲುಪುತ್ತಾನೆ. ನೊಂದ ಬಿಜ್ಜಳ ಖಿನ್ನವದನನಾಗಿ ಅಂತಃಪುರಕ್ಕೆ ತೆರಳುವಷ್ಟರಲ್ಲಿ ಕೊಂಡಿ ಮಂಚಣ್ಣಾದಿಗಳು ಮಸಲತ್ತು ಮಾಡಿ ರಾಜಾಜ್ಞೆ ನೆಪದಲ್ಲಿ ಹರಳಯ್ಯ ಮಧುವರಸ ದಂಪತಿಗಳನ್ನು ಕಣ್ಣು ಕೀಳಿಸಿ ಆನೆ ಕಾಲಿಗೆ ಕಟ್ಟಿಸಿ ಕಲ್ಯಾಣದ ಬೀದಿಯಲ್ಲಿ ಮೆರವಣಿಗೆ ಹೊರಡಿಸುತ್ತಾರೆ. ಇದೇ ಎಳೆಹೂಟೆ ಶಿಕ್ಷೆ. ಮದುಮಕ್ಕಳನ್ನು ಶೂಲಕ್ಕೇರಿಸಲಾಗುತ್ತದೆ. ಉಳಿದ ಶರಣರನ್ನು ಅಟ್ಟಾಡಿಸಿಕೊಂಡು ಕೊಲ್ಲಲಾಗುತ್ತದೆ. ಕೆಲವರು ವಚನದ ಕಟ್ಟುಗಳ ಸಂರಕ್ಷಣೆಗಾಗಿ ತಲೆ ಮರೆಸಿಕೊಂಡು ಕಾಲ್ತೆಗೆಯುತ್ತಾರೆ. ಇದೇ ಸಂದರ್ಭ ಬಳಸಿ ಶರಣರ ವೇಷ ಧರಿಸಿದ ವೈರಿಗಳು ಬಿಜ್ಜಳನ ಕೊಲೆಗೈಯ್ಯುತ್ತಾರೆ. ಕಲ್ಯಾಣದಲ್ಲಿ ರಕ್ತದ ಓಕುಳಿ ಆಡಲಾಗುತ್ತದೆ. ವಿಷಯ ಬಸವಣ್ಣನವರಿಗೆ ತಿಳಿಯಲಾಗಿ ನೊಂದುಕೊಂಡು ಈ ಮೇಲಿನ ವಚನ ಉವಾಚಿಸುತ್ತಾರೆ.

ಬಿಜ್ಜಳನನ್ನು ಅತಿಯಾಗಿ ಹಚ್ಚಿಕೊಂಡಿದ್ದ ಬಸವಣ್ಣ ತಾನು ಜೋಳದ ಪಾಳಿಗಾಗಿ ಅಂದರೆ ಸಂಬಳದ ಮುಲಾಜಿಗಾಗಿ ಬಿಜ್ಜಳನ ಚಾಕರಿ ಮಾಡಿದವನಲ್ಲ. ಸ್ನೇಹಿತನಂತಿದ್ದ ರಾಜನ ರಕ್ಷಣೆ ಮತ್ತು ಕಲಚೂರಿ ಸಾಮ್ರಾಜ್ಯದ ಪ್ರಜೆಗಳಿಗಾಗಿ ತನ್ಮೂಲಕ ಅಖಂಡ ಮಾನವ ಕುಲಕೋಟಿಯ ಸಂರಕ್ಷಣೆಗಾಗಿ ತನ್ನನ್ನು ತಾನು ಸಮರ್ಪಿಸಿಕೊಂಡಿದ್ದ ವೇಳೆವಾಳಿ ಎನ್ನುತ್ತಾನೆ. ಒಡೆಯನಿಗಾಗಿ ತನ್ನನ್ನೆ ಬಲಿ ಕೊಟ್ಟುಕೊಳ್ಳುವುದನ್ನು ವೇಳೆವಾಳಿ ಎನ್ನಲಾಗುತ್ತದೆ. ರಾಜ್ಯ ಪ್ರಭುತ್ವದಲ್ಲಿ ಇದೊಂದು ವೀರವ್ರತವೇ ಆಗಿತ್ತು. ಬಸವಣ್ಣನವರು ಸಕಲ ಜೀವಾತ್ಮರ ಲೇಸಿಗಾಗಿ ತಮ್ಮನ್ನೆ ಬಲಿ ಕೊಟ್ಟುಕೊಂಡಿದ್ದರಲ್ಲವೆ? ಅದಕ್ಕಾಗಿಯೇ ಅವರು ಕ್ರಾಂತಿಯ ರಣರಂಗದಲ್ಲಿ ಹೆದರಿ ಓಡುವವನಲ್ಲ. ಸಾವಿಗೆ ಅಂಜದ ವೀರವ್ರತಿ ತಾನೆಂಬುದಾಗಿ ಕೂಡಲಸಂಗಮ ಕೇಳಾ ಎಂದು ಉದ್ಘೋಷಣೆ ಮಾಡುತ್ತಾರೆ. 'ಕೇಳಾ' ಪದವು ಕೂಡಲಸಂಗಯ್ಯನನ್ನೆ ನಡುಗಿಸಿರಲು ಸಾಕು. ಅದೆಂಥ ಸಮರ್ಪಣೆ! ರಕ್ತದ ಮಡುವಿನಲ್ಲಿ ಬಿದ್ದಾಗಲೂ ಎದೆಗುಂದದ ಅವರದು ಸಾಟಿಯಿಲ್ಲದ ಸಾತ್ವಿಕ ಕಲಿತನ. ಮಾನವ ಚರಿತ್ರೆಯಲ್ಲಿ ಅಚ್ಚಳಿಯದ ಬಲಿದಾನ. ಶರಣರ ಎಳೆಹೂಟೆಯಾದ ದಿನವೇ ಮಹಾನವಮಿ. ನಂಬಿದ ತತ್ವಗಳಿಗಾಗಿ ಪ್ರಾಣಾರ್ಪಣೆ ಮಾಡಿದ ಶರಣ ಸಂದೋಹದ ನೆನಪಿಗಾಗಿ ಬಸವಾನುಯಾಯಿಗಳು ಇದನ್ನು ಆಚರಿಸಿಕೊಂಡು ಬರುತ್ತಿದ್ದಾರೆ. ಸಾವನ್ನು ಹಬ್ಬದಂತೆ ಇದಿರುಗೊಳ್ಳುವ ಈ ಧೃತಿ ಶರಣರಿಗಲ್ಲದೆ ಇತರರಿಗೆ ಅಳವಡುವುದು ಕಷ್ಟವೇ ಸರಿ. ದೇಸೀಯ ಹಬ್ಬಗಳಿಗೆ ಶರಣ ಸಂಸ್ಕೃತಿಯ ಸ್ಪರ್ಶವು ಇದೆ ಎಂಬುದನ್ನು ತಡವಾಗಿಯಾದರೂ ಸ್ಮರಿಸಿಕೊಳ್ಳಬೇಕಿದೆ.

■ ಮೀನಾಕ್ಷಿ ಬಾಳಿ

## ಮಾತೇ ಮುತ್ತು

- ವಿನೋದವಾಗಿ ಒಂದಲ್ಲ ಎರಡಲ್ಲ ದೇವರ ಅವತಾರಗಳಿಗಿಂತಲೂ ಅನೇಕ ರೂಪವಾಗಿ ಮಾನವನ ಅನುಭವವು ವ್ಯಕ್ತವಾಗುತ್ತಿದೆ.
  —ಗೌರೀಶ್ ಕಾಯ್ಕಿಣಿ
- ಒಬ್ಬರ ಅನುಭವದಿಂದ ಮತ್ತೊಬ್ಬರು ಬುದ್ಧಿ ಕಲಿಯುತ್ತಾರೆ ಎನ್ನುವುದು ಸುಳ್ಳು. ರಾಷ್ಟ್ರಗಳು ಇತಿಹಾಸದ ಘಟನೆಗಳಿಂದ ಬುದ್ಧಿ ಕಲಿಯುತ್ತವೆ ಎನ್ನುವುದು ಎಷ್ಟು ಸುಳ್ಳೋ ಇದೂ ಅಷ್ಟೇ ಸುಳ್ಳು.
  —ಎ.ಎನ್. ಮೂರ್ತಿರಾವ್
- ಇವತ್ತಿನ ಹಾರೈಕೆ, ನಾಳಿನ ಪೂರೈಕೆ, ಇಂದಿನ ಕನಸು, ನಾಳೆಯ ನನಸು.
  —ಕುವೆಂಪು
- ಜ್ಞಾನದ ಜಗತ್ತಿನಲ್ಲಿ ಕಾಣುವ ಶೂನ್ಯವನ್ನು ಅನುಭವದಿಂದ ತುಂಬಬಹುದು.
  —ಕ್ಯಾಂಬೆಲ್